**All India Radio: Bangalore**
**National Bulletin In Kannada**
**05.10.2026  1.10  pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**05.10.2026  1.10  pm**

**<>><><*><><<>**

ಮುಖ್ಯಾಂಶಗಳು

**೧.  ನವದೆಹಲಿಯಲ್ಲಿ ಸ್ವಿಜರ್‌ಲೆಂಡ್ ಅಧ್ಯಕ್ಷ ಗೈ ಪಾರ್ಮೆಲಿನ್, ಪ್ರಧಾನಿ ನರೇಂದ್ರ ಮೋದಿ ನಡುವಿನ ದ್ವಿಪಕ್ಷೀಯ ಮಾತುಕತೆ ಪ್ರಗತಿಯಲ್ಲಿ**

**೨.  ಪ್ರತಿ ಸಂದರ್ಭದಲ್ಲಿ ಭಾರತದ ಪರವಾಗಿ ರಷ್ಯಾ ದೃಢವಾಗಿ ನಿಂತಿದೆ - ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್**

**೩.  ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಶೀಘ್ರ ಅಂತಿಮ - ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್**

**೪.  ಗುಜರಾತ್‌ನಲ್ಲಿ ಇಂದಿನಿಂದ ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯದಿಂದ ಚಿಂತನಾ ಶಿಬಿರ**

**<>><><*><><<>**

ನವದೆಹಲಿಯಲ್ಲಿಂದು ಸ್ವಿಜರ್‌ಲೆಂಡ್ ಅಧ್ಯಕ್ಷ ಗೈ ಪಾರ್ಮೆಲಿನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ದ್ವಿಪಕ್ಷೀಯ ಮಾತುಕತೆ ಪ್ರಗತಿಯಲ್ಲಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ಪಾರ್ಮೆಲಿನ್ ಅವರು ವ್ಯಾಪಾರ ಮತ್ತು ಹೂಡಿಕೆ, ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ, ಚಲನಶೀಲತೆ, ಸಂಸ್ಕೃತಿ ಹಾಗೂ ಜನರ ನಡುವಿನ ಸಂಪರ್ಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ದ್ವಿಪಕ್ಷೀಯ ಸಹಕಾರದ ಪ್ರಗತಿಯನ್ನು ಪರಿಶೀಲಿಸುತ್ತಿದ್ದಾರೆ. ಸಹಕಾರ ಸೇರಿದಂತೆ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ನಾಯಕರು ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ.  ಹಿರಿಯ ಅಧಿಕಾರಿಗಳು ಮತ್ತು ಉದ್ಯಮ ವಲಯದ ಪ್ರಮುಖರನ್ನು ಒಳಗೊಂಡ ಉನ್ನತ ಮಟ್ಟದ ನಿಯೋಗದೊಂದಿಗೆ ಸ್ವಿಜರ್‌ಲೆಂಡ್ ಅಧ್ಯಕ್ಷರು ಭಾರತಕ್ಕೆ ಭೇಟಿ ನೀಡಿದ್ದಾರೆ. ಇದಕ್ಕೂ ಮುನ್ನ ನವದೆಹಲಿಗೆ ಆಗಮಿಸಿದ ಸ್ವಿಜರ್‌ಲೆಂಡ್

ಅಧ್ಯಕ್ಷರನ್ನು ವಿಮಾನ ನಿಲ್ದಾಣದಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ರಾಜ್ಯ ಸಚಿವ ಅಜಯ್ ತಮ್ಟಾ ಸ್ವಾಗತಿಸಿದರು. ಸ್ವಿಟ್ಜರ್ಲೆಂಡ್ ಅಧ್ಯಕ್ಷ ಗೈ ಪಾರ್ಮೆಲಿನ್ ಅವರು ಇಂದು ಸಂಜೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಲಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್.ಜೈಶಂಕರ್ ಕೂಡ ಪಾರ್ಮೆಲಿನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ.

<>><><*><><<>

ಭಾರತದ ಭದ್ರತೆ ಮತ್ತು ಪ್ರಾದೇಶಿಕ ಸಮಗ್ರತೆಗೆ ಬೆದರಿಕೆ ಉಂಟಾದಾಗ ಹಲವು ರೀತಿಯಲ್ಲಿ ಭಾರತದ ಪರವಾಗಿ ನಿಂತ ದೇಶ ರಷ್ಯಾ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್.ಜೈಶಂಕರ್ ಶ್ಲಾಘಿಸಿದ್ದಾರೆ. ನವದೆಹಲಿಯಲ್ಲಿ ನಡೆದ ೬೨ನೇ ಮ್ಯೂನಿಚ್ ಭದ್ರತಾ ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಅವರು, ಭಾರತದ ನೆರೆಯ ದೇಶವೊಂದರಲ್ಲಿ ಮಿಲಿಟರಿ ಆಡಳಿತವಿದ್ದಾಗ ವಿಶ್ವದ ಬಹುತೇಕ ರಾಷ್ಟ್ರಗಳು ಆ ಆಡಳಿತವನ್ನೇ ಬೆಂಬಲಿಸಲು ಮುಂದಾಗಿದ್ದ ಸಂದರ್ಭದಲ್ಲೂ, ರಷ್ಯಾ ಮಾತ್ರ ಭಾರತದೊಂದಿಗೆ ಅತ್ಯುತ್ತಮ ಸಂಬಂಧವನ್ನು ಹೊಂದಿತ್ತು. ಆ ಐತಿಹಾಸಿಕ ಹಿನ್ನೆಲೆಯು ಭಾರತ-ರಷ್ಯಾ ಸಂಬಂಧವನ್ನು ಹಲವು ರೀತಿಯಲ್ಲಿ ರೂಪಿಸಿದೆ ಎಂದು ಹೇಳಿದರು. ಇಂದು ದ್ವಿಪಕ್ಷೀಯ ಸಂಬಂಧವು ಆ ಹಂತವನ್ನೂ ಮೀರಿ ವಿಸ್ತರಿಸಿದೆ ಮತ್ತು ಇದೀಗ ಅದು ಪ್ರಮುಖವಾಗಿ ಆರ್ಥಿಕ ಸಂಬಂಧವಾಗಿಯೂ ಬೆಳೆದಿದೆ ಎಂದು ಅವರು ತಿಳಿಸಿದರು. ಉಭಯ ದೇಶಗಳ ನಡುವೆ ಗಣನೀಯ ಪ್ರಮಾಣದ ವ್ಯಾಪಾರ ಮತ್ತು ಹೂಡಿಕೆಯ ಜೊತೆಗೆ ಮಿಲಿಟರಿ, ಪರಮಾಣು ಮತ್ತು ಬಾಹ್ಯಾಕಾಶ ಕ್ಷೇತ್ರಗಳಿಗೆ ಸಂಬಂಧಿಸಿದ ಸಹಕಾರವೂ ಇದೆ ಎಂದು ಹೇಳಿದರು. ರಷ್ಯಾ-ಉಕ್ರೇನ್ ಸಂಘರ್ಷ ಅಂತ್ಯಗೊಳಿಸಬೇಕೆಂಬುದು ಭಾರತದ ಸ್ಪಷ್ಟ ನಿಲುವಾಗಿದೆ. ಇದಕ್ಕೆ ಮಾತುಕತೆ ಮತ್ತು ರಾಜತಾಂತ್ರಿಕತೆಯ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಸಂಧಾನಗಳು ನಡೆಯಬೇಕೆಂಬುದು ಭಾರತದ ದೃಢ ನಂಬಿಕೆಯಾಗಿದೆ ಎಂದು ಸಚಿವ ಡಾ. ಜೈಶಂಕರ್ ಪುನರುಚ್ಚರಿಸಿದರು.

<>><><*><><<>

ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಕುರಿತ ಮಾತುಕತೆಗಳು ಇನ್ನು ಪ್ರಗತಿಯಲ್ಲಿದ್ದು, ಅದು ಅಂತಿಮಗೊಳ್ಳಬೇಕಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಮಾತುಕತೆಗಳು ಒಂದು ನಿರ್ದಿಷ್ಟ ಹಂತ ತಲುಪಿವೆ. ಚರ್ಚೆಯಲ್ಲಿರುವ ಈ ಒಪ್ಪಂದವು ಅತ್ಯಂತ ಕಠಿಣ ಹಾಗೂ ಸುದೀರ್ಘ ಮತ್ತು ಕೂಲಂಕಷ ಮಾತುಕತೆಗಳಿಗೆ ಒಳಪಟ್ಟಿವೆ ಎಂದು ತಿಳಿಸಿದ್ದಾರೆ.

ವ್ಯಾಪಾರ ಸಮತೋಲನವು ಭಾರತದ ಪರವಾಗಿಯೇ ಇದೆ. ದೇಶಗಳು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಪ್ರಸ್ತಾಪಿಸಲು ಮಾತುಕತೆಗಳೇ ಏಕೈಕ ವೇದಿಕೆಯಾಗಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಪ್ರತಿಪಾದಿಸಿದ್ದಾರೆ.

<>><><*><><<>

ಭಾರತ - ಐರೋಪ್ಯ ಒಕ್ಕೂಟ ವ್ಯಾಪಾರ ಒಪ್ಪಂದವು ಮಾತುಕತೆ ಅಂತಿಮಗೊಳಿಸುವ ಭಾರತದ ವಿಧಾನವನ್ನು ಪ್ರತಿಬಿಂಬಿಸುತ್ತದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ಮ್ಯೂನಿಚ್ ನಾಯಕರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಈ ಒಪ್ಪಂದವು ಸುಮಾರು ೨ ಶತಕೋಟಿ ಜನರನ್ನು ಪ್ರತಿನಿಧಿಸುವ ಹಾಗೂ ಜಾಗತಿಕ ಜಿಡಿಪಿಯ ಕಾಲುಭಾಗದಷ್ಟು ಆರ್ಥಿಕತೆಯನ್ನು ಒಳಗೊಂಡಿದೆ ಎಂದು ತಿಳಿಸಿದರು. ಒಪ್ಪಂದದ ಅಡಿಯಲ್ಲಿ ಭಾರತ, ತನ್ನ ಸುಂಕ ಮಾರ್ಗಗಳಲ್ಲಿ ೯೨.೫ ಪ್ರತಿಶತದಷ್ಟು ತೆರೆದಿದೆ. ಇದು ವ್ಯಾಪಾರ ಮೌಲ್ಯದ ಸುಮಾರು ೯೭ ಪ್ರತಿಶತದಷ್ಟಿದೆ ಎಂದು ನಿರ್ಮಲಾ ಸೀತಾರಾಮನ್ ಮಾಹಿತಿ ನೀಡಿದರು.

<>><><*><><<>

ಭಾರತ ಮತ್ತು ಕೆನಡಾ ತಮ್ಮ ಪ್ರಸ್ತಾವಿತ 'ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ' ಕುರಿತಾದ ಮಾತುಕತೆಯ ಐದನೇ ಸುತ್ತನ್ನು ಇಂದು ಒಟ್ಟಾವಾದಲ್ಲಿ ಆರಂಭಿಸಲಿವೆ. ೨೦೨೬ರ ಅಂತ್ಯದ ವೇಳೆಗೆ ಈ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವುದು ಉಭಯ ದೇಶಗಳ ಗುರಿಯಾಗಿದೆ. ಐದು ದಿನಗಳ ಕಾಲ ನಡೆಯಲಿರುವ ಈ ಮಾತುಕತೆಗಳು, ಈ ತಿಂಗಳ ೯ರವರೆಗೆ ಮುಂದುವರಿಯಲಿವೆ. ಈ ಹಿಂದಿನ ಮಾತುಕತೆಗಳು ಕಳೆದ ತಿಂಗಳ ೧೮ರಂದು ನವದೆಹಲಿಯಲ್ಲಿ ಮುಕ್ತಾಯಗೊಂಡಿತ್ತು. ಈಗ ಅಧಿಕಾರಿಗಳು ಅಂತಿಮ ಒಪ್ಪಂದದತ್ತ ತ್ವರಿತ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ೨೦೩೦ರ ವೇಳೆಗೆ ದ್ವಿಪಕ್ಷೀಯ ವ್ಯಾಪಾರವನ್ನು ೪.೬೫ ಲಕ್ಷ ಕೋಟಿ ರೂಪಾಯಿಗಳಿಗೆ ವಿಸ್ತರಿಸುವ ಹಂಚಿಕೆಯ ಆಶಯಕ್ಕೆ ಸಿಇಪಿಎ ಬೆಂಬಲ ನೀಡುತ್ತದೆ.

<>><><*><><<>

ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ದೇಶಾದ್ಯಂತ, 'ಜನ ಸೇವೆಯೇ ದೇಶ ಸೇವೆ' ಎಂಬ ಅಭಿಯಾನ ನಡೆಯುತ್ತಿದೆ. ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ

ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ಭಯೋತ್ಪಾದನೆಯ ವಿರುದ್ಧ ದಿಟ್ಟ ಹೆಜ್ಜೆ ಕುರಿತ ಒಂದು ವರದಿ ಇಲ್ಲಿದೆ. ೨೬/೧೧ ರ ದಾಳಿಯಲ್ಲಿ ಪಾಕಿಸ್ತಾನದ ಬಂದೂಕುಧಾರಿಗಳು, ಮುಂಬೈಯನ್ನು ನಾಲ್ಕು ದಿನಗಳ ಕಾಲ ವಶಪಡಿಸಿಕೊಂಡಾಗ, ಭಾರತದ ಉತ್ತರ ಕಾಗದಪತ್ರಗಳಾಗಿತ್ತು. ದಾಖಲೆಗಳು ಗಡಿಯನ್ನು ದಾಟಿ ಹೋದವು. ಆದರೆ ಯಾವುದೇ ಕಠಿಣ ಕ್ರಮ ಕೈಗೊಳ್ಳಲಿಲ್ಲ. ದಾಳಿಗಳು ನಡೆಯುತ್ತಲೇ ಇದ್ದವು. ಕ್ಷಮೆಯಾಚಿಸುವ ಪದ್ಧತಿ ೨೦೧೬ರ ಸೆಪ್ಟೆಂಬರ್‌ನಲ್ಲಿ ಕೊನೆಗೊಂಡಿತು. ಭಾರತೀಯ ಪಡೆಗಳು ಗಡಿ ನಿಯಂತ್ರಣ ರೇಖೆಯನ್ನು ದಾಟಿ, ಭಯೋತ್ಪಾದಕ ನೆಲೆಗಳನ್ನು ಹೊಡೆದುರುಳಿಸಿದವು. ೨೦೧೯ರ ಫೆಬ್ರವರಿಯಲ್ಲಿ ಮಿರಾಜ್ ಯುದ್ಧ ವಿಮಾನಗಳು ಪಾಕಿಸ್ತಾನದೊಳಗಿನ ಬಾಲಾಕೋಟ್ ಭಯೋತ್ಪಾದಕ ಶಿಬಿರದ ಮೇಲೆ ದಾಳಿ ಮಾಡಿದವು. ಇದು ೧೯೭೧ ರ ನಂತರ ಅಂತಾರಾಷ್ಟ್ರೀಯ ಗಡಿಯಲ್ಲಿ ಭಾರತ ನಡೆಸಿದ ವಾಯುದಾಳಿಯಾಗಿದೆ. ೨೦೨೫ರ ಮೇ ನಲ್ಲಿ ಆಪರೇಷನ್ ಸಿಂಧೂರ ಮೂಲಕ ಒಂದೇ ರಾತ್ರಿಯಲ್ಲಿ ಒಂಬತ್ತು ಭಯೋತ್ಪಾದಕ ನೆಲೆಗಳನ್ನು ಹೊಡೆದುರುಳಿಸಿತು. ಭಾರತದ ಸಿದ್ಧಾಂತ ಈಗ ಸ್ಪಷ್ಟವಾಗಿದೆ. ಭಯೋತ್ಪಾದಕ ದಾಳಿಗೆ ಮಿಲಿಟರಿ ಉತ್ತರ ಸಿಗುತ್ತದೆ. ಭಯೋತ್ಪಾದಕರು ಮತ್ತು ಅವರಿಗೆ ಆಶ್ರಯ ನೀಡುವ ದೇಶದ ನಡುವೆ ಯಾವುದೇ ವ್ಯತ್ಯಾಸ ಇಲ್ಲ.

<>><><*><><<>

ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಗುಜರಾತ್‌ನಲ್ಲಿ ಇಂದಿನಿಂದ ಎರಡು ದಿನಗಳ ಚಿಂತನ ಶಿಬಿರ ಏರ್ಪಡಿಸಿದೆ. ದೇಶದ ಹೆದ್ದಾರಿ ಮೂಲಸೌಕರ್ಯ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಮತ್ತು ಅನುಷ್ಠಾನ ಸಂಸ್ಥೆಗಳ ಹಿರಿಯ ಪ್ರತಿನಿಧಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಮಾವೇಶದಲ್ಲಿ ಕಾರ್ಯಾನುಷ್ಠಾನದಲ್ಲಿ ಎದುರಾಗುವ ಸವಾಲುಗಳು, ನಾವೀನ್ಯತಾ ಮತ್ತು ಪ್ರತಿಫಲಿಸಬಹುದಾದ ಉಪಕ್ರಮಗಳ ಬಗ್ಗೆ ಚರ್ಚಿಸಲಾಗುತ್ತದೆ. ಯೋಜನೆಗಳ ಗುಣಮಟ್ಟ ಸುರಕ್ಷತೆ ಮತ್ತು ದಕ್ಷ ಅನುಷ್ಠಾನದ ಬಗ್ಗೆಯು ಚಿಂತನ ಶಿಬಿರದಲ್ಲಿ ಸಮಾಲೋಚಿಸಲಾಗುತ್ತದೆ. ಕೇಂದ್ರ ರಸ್ತೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಹಾಗೂ ರಾಜ್ಯ ಸಚಿವರಾದ ಅಜಯ್ ತಮಟ ಮತ್ತು ಹರ್ಷ ಮಲ್ಹೋತ್ರಾ ಪಾಲ್ಗೊಳ್ಳಲಿದ್ದಾರೆ.

<>><><*><><<>

ಇಂದು ಗುರುನಾನಕ್ ದೇವ್ ಅವರ ಜ್ಯೋತಿ ಜ್ಯೋತ್ ದಿವಸ್ ಎಂದರೆ ದೈವಾಧೀನಾರಾದ ದಿನ. ಅವರಿಗೆ ಲೋಕಸಭಾ ಅಧ್ಯಕ್ಷ ಓಂಬಿರ್ಲಾ ಗೌರವ ನಮನ ಸಲ್ಲಿಸಿದ್ದಾರೆ. ಗುರುನಾನಕ್ ದೇವ್ ಅವರು, ತಮ್ಮ ಜೀವನದ ಮೂಲಕ ಜಗತ್ತಿಗೆ ಸತ್ಯ, ಸಹಾನುಭೂತಿ, ಮಾನವೀಯತೆ ಮತ್ತು ಸದ್ಗುಣಗಳನ್ನು ಬೋಧಿಸಿದರು. ಸಮಾಜದಲ್ಲಿ ವ್ಯಾಪಕವಾಗಿದ್ದ ಮೂಡನಂಬಿಕೆಗಳು, ತಾರತಮ್ಯ, ಜಾತಿಪದ್ಧತಿ ಮತ್ತು ಸಾಮಾಜಿಕ ಪಿಡುಗುಗಳ ವಿರುದ್ಧ ಅವರು ನಿರ್ಭಯವಾಗಿ ಧ್ವನಿ ಎತ್ತಿದರು. ಪ್ರೀತಿ, ಸಹಾನುಭೂತಿ, ಸೇವೆ, ಸತ್ಯ, ಬಾತೃತ್ವ ಮತ್ತು ಪರಸ್ಪರ ಗೌರವವನ್ನು ಆಧರಿಸಿದ ಗುರುನಾನಕ್ ದೇವ್ ಅವರ ಸಂದೇಶ ಇಂದಿಗೂ ಪ್ರಸ್ತುತವಾಗಿವೆ ಎಂದು ಸಾಮಾಜಿಕ ಜಾಲತಾಣದಲ್ಲಿ ಓಂಬಿರ್ಲಾ ಹೇಳಿದ್ದಾರೆ.

**<>><><*><><<>**

ಈಜಿಪ್ಟ್‌ನ ಕೈರೋದಲ್ಲಿ ನಡೆಯಲಿರುವ ಬಿಡಬ್ಲ್ಯೂಎಫ್ ವಿಶ್ವ ಜೂನಿಯರ್ ಮಿಶ್ರ ತಂಡಗಳ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಬ್ಯಾಡ್ಮಿಂಟನ್ ತಂಡ ಇಂದು ತನ್ನ ಅಭಿಯಾನ ಆರಂಭಿಸಲಿದೆ. ಭಾರತೀಯ ತಂಡದ ನೇತೃತ್ವವನ್ನು ತನ್ವಿ ಪತ್ರಿ ವಹಿಸಿದ್ದಾರೆ. ಇವರು ಇತ್ತೀಚೆಗೆ ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ೧೭ ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದರು. ಭಾರತ, ಪೆರು ಮತ್ತು ಅಲ್ಜೀರಿಯಾ ಜೊತೆಗೆ 'ಡಿ೧' ಗುಂಪಿನಲ್ಲಿ ಸ್ಥಾನ ಪಡೆದಿದೆ. ಭಾರತೀಯ ತಂಡ ನಾಳೆ ಅಲ್ಜೀರಿಯಾವನ್ನು ಮತ್ತು ಮಂಗಳವಾರ ಪೆರು ತಂಡವನ್ನು ಎದುರಿಸಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ಕ್ಕೆ ><><<>**